ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 06 ನೇ ಮಾರ್ಚ್, 2020

ಹೆಚ್.ಡಿ. ಕೋಟೆ ಸರಗೂರು ಬಸ್ ಸೌಲಭ್ಯ

ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

368 (371) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೆಗ್ಗಡದೇವನ ಕೋಟೆಯಿಂದ ನೂತನ ತಾಲ್ಲೂಕು ಕೇಂದ್ರವಾದ ಸರಗೂರಿಗೆ, ಸರಗೂರಿನಿಂದ ಹೆಚ್.ಡಿ. ಕೋಟೆಗೆ ಇರುವ ಸಾರಿಗೆ ಬಸ್‌ಗಳ ಸೌಲಭ್ಯವನ್ನು ಹೆಚ್ಚಳ ಮಾಡಲು ಕ್ರಮ ಜರುಗಿಸಲಾಗುವುದೇ;

(ಆ) ಸರಗೂರಿಗೆ ಅನೇಕ ಕಡೆಗಳಿಂದ ಬಸ್ ಬಂದರೂ, ಎಲ್ಲಾ ಬಸ್‌ಗಳೂ ಭರ್ತಿಯಾಗಿರುವುದರಿಂದ ಸರಗೂರಿನಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಬಸ್ ಹತ್ತಲು ಸಾಧ್ಯವಾಗದ ಕಾರಣ ಸಾರಿಗೆ ವ್ಯವಸ್ಥೆಯಿಂದ ವಂಚಿತರಾಗಿದ್ದು, ಹೆಚ್.ಡಿ. ಕೋಟೆ ಡಿಪೋದಿಂದಲೇ ಸರಗೂರಿಗೆ ಬಸ್ ಸೌಲಭ್ಯ ಕಲ್ಪಿಸಲಾಗುವುದೇ;

(ಇ) ಚೆನ್ನಗುಂಡಿ ಗ್ರಾಮದಿಂದ ಸರಗೂರು, ಹೆಚ್.ಡಿ. ಕೋಟೆಗೆ ನೇರ ಬಸ್ ಸೌಲಭ್ಯ ಇಲ್ಲದೆ ತೊಂದರೆ ಆಗಿದ್ದು, ಹೆಡಿಯಾಲಕ್ಕೆ ಬಂದು ಬಸ್ ಹತ್ತಬೇಕಾದ ಪರಿಸ್ಥಿತಿ ಇರುವುದರಿಂದ, ಚೆನ್ನಗುಂಡಿಯಿಂದ ಸರಗೂರು, ಹೆಚ್.ಡಿ. ಕೋಟೆಗೆ ನೇರ ಬಸ್ ಸೌಲಭ್ಯ ಕಲ್ಪಿಸಲಾಗುವುದೇ?